ಆತ್ಮಚರಿತ್ರೆಯಲ್ಲಿ ಬರೆದಿದ್ದಾರಂತೆ ಎಂಬ ಸುದ್ದಿ ಸಂಜೆಯಾಗುವುದರೊಳಗೆ ಬೆಳಕಿನ ವೇಗಕ್ಕಿಂತಲೂ ವೇಗವಾಗಿ ಮನೆಮನೆಗೆ ತಲುಪಿತು. ಅದಾದ ಮಾರನೆಯ ದಿನ ಭೋಜೇಗೌಡನು ಊರಿನಲ್ಲಿ ಮತ್ತೆ ಸಭೆ ಕರೆದ. ಸಭೆಯಲ್ಲಿ ಮಾತನಾಡಲು ಶಿವರಾಮನಿಗೆ ಹೇಳಿಕಳುಹಿಸಲಾಯಿತು. ಆದರೆ, ಮೈ ಹುಷಾರಿಲ್ಲ ಎಂಬ ನೆಪ ಹೇಳಿ ಶಿವರಾಮನು ತನ್ನ ರೂಮಿನಲ್ಲಿಯೇ ಉಳಿದ.

ಸಂಜೆ ಊರಿನ ಸಭೆಯನ್ನು ಉದ್ದೇಶಿಸಿ ಭೋಜೇಗೌಡ ಮೈಕಿನಲ್ಲಿ ಮಾತನಾಡುತ್ತಿದ್ದುದು ಶಿವರಾಮನಿಗೆ ಇಷ್ಟವಿಲ್ಲದಿದ್ದರೂ ಕಿವಿಯ ಮೇಲೆ ಅಪ್ಪಳಿಸುತ್ತಿತ್ತು. ಭೋಜೇಗೌಡನು, 'ನೋಡ್ರಪ್ಪಾ, ಶ್ರೀನಿವಾಸರಾಯರ ರೂಮಿನಲ್ಲಿ ಸಿಕ್ಕ ವಿಸ್ಕಿಯ ಬಾಟಲಾಗಲೀ ಅಥವಾ ತಾವು ಇಟ್ಟುಕೊಂಡಿದ್ದ ಸಂಬಂಧದ ಬಗ್ಗೆ ಬರೆದಿರುವ ವಿಷಯದ ಬಗೆಗೆ ಮಹತ್ವ ಕೊಡುವುದು ಬೇಡ. ಅವರು ಕುಡಿಯಬಾರದು, ಸಂಬಂಧ ಇಟ್ಟುಕೊಳ್ಳಬಾರದು ಎಂದು ನಿರ್ಣಯಿಸಲು ನಾವ್ಯಾರು? ಅವರು ಊರಿಗೆ ಮಾಡಿದ ಸೇವೆಯನ್ನು ಪರಿಗಣಿಸಬೇಕೇ ವಿನಾ, ಅವರ ವೈಯಕ್ತಿಕ ವಿಷಯಗಳನ್ನು ತೆಗೆದುಕೊಂಡು ನಮಗೇನಾಗಬೇಕಿದೆ? ಆದರೂ ಊರಿನ ಹಿರಿಯರು ಮತ್ತು ಸಕಲ ಗ್ರಾಮಸ್ಥರ ಒತ್ತಾಯಕ್ಕೆ ಮಣಿದು ನಾನು ಇಬ್ಬರ ಹೆಸರನ್ನು ಅಂದರೆ ಗಾಂಧೀವಾದಿ ಶ್ರೀನಿವಾಸರಾಯರ ಹೆಸರನ್ನು ಮತ್ತು ನಮ್ಮ ತಂದೆ ತಮ್ಮೇಗೌಡರ ಹೆಸರನ್ನು ಸರ್ವಸಭೆಯಲ್ಲಿ ಮಂಡಿಸುತ್ತಿದ್ದೇನೆ. ಎಲ್ಲರೂ ಕೈ ಎತ್ತುವುದರ ಮೂಲಕ ತಮಗೆ ಇಷ್ಟ ಬಂದ ಹೆಸರಿನ ಆಯ್ಕೆಯನ್ನು ಮಾಡಲಿ ಎಂದು ಈ ಮೂಲಕ ವಿನಂತಿಸುತ್ತೇನೆ' ಎಂದು ಅತಿ ವಿನಯದಿಂದ ಭೋಜೇಗೌಡನು ಮಾತನಾಡುತ್ತಿದ್ದ.

ಇನ್ನು ಶಿವರಾಮನಿಗೆ ಯಾವುದನ್ನೂ ಕೇಳಿಸಿಕೊಳ್ಳುವ ಅಗತ್ಯ ಕಂಡುಬರಲಿಲ್ಲ. ಈಗ ಅವನಿಗೆ ಎಲ್ಲಾ ಸ್ಪಷ್ಟವಾಗತೊಡಗಿತು. ಅಷ್ಟರಲ್ಲಿ ಯಾರೋ ಬಾಗಿಲನ್ನು ತಟ್ಟಿದ ಸದ್ದಾಯಿತು. ಬಾಗಿಲು ತೆರೆದರೆ ಎದುರಿಗೆ ಯರ್ರಿಸ್ವಾಮಿ ನಿಂತುಕೊಂಡಿದ್ದ. ಅವನ ಕಣ್ಣುಗಳು ಕೆಂಪಾಗಿದ್ದವು. ಆದರೆ, ಕುಡಿದಿರಲಿಲ್ಲ. ಸೀದಾ ಒಳಗೆ ಬಂದು ಬೇಜಾರಿನಲ್ಲಿ ಕುಳಿತುಕೊಂಡ. ಒಂದು ಕ್ಷಣ ಇಬ್ಬರೂ ಮಾತನಾಡಲಿಲ್ಲ. ಕೊನೆಗೆ ಯರ್ರಿಸ್ವಾಮಿಯು ದುಃಖದಿಂದ, ಭಾವುಕನಾಗಿ ಮಾತನಾಡತೊಡಗಿ, 'ಅಲ್ಲಾ, ನನ್ನ ಕುಡಿತ ಬಿಡಿಸಲು ಶ್ರೀನಿವಾಸರಾಯರು ಎಷ್ಟು ಕಷ್ಟಪಟ್ಟವ್ರೆ ಅಂತ ನಂಗೊತ್ತು. ಅವರ ಹತ್ತಿರ ವಿಸ್ಕಿ ಬಾಟಲು ಇತ್ತಂತೆ. ಅವರು ಕುಡೀತಾ ಇದ್ರಂತೆ ಅಂತ ಹಬ್ಬಿಸೋ ಸುದ್ದಿನಾ ನೀವೂ ನಂಬ್ತೀರಲ್ಲಾ, ನಿಮ್ಮ ಬುದ್ಧಿಗೆ ಏನ್ ಹೇಳಬೇಕು ಗೊತ್ತಾಗ್ತಾ ಇಲ್ಲ' ಎಂದ.

'ಇಲ್ಲಾ ಯರ್ರಿಸ್ವಾಮಿ, ಅವರ ಟ್ರಂಕಿನಲ್ಲಿ ಸಿಕ್ಕ ಬಾಟಲು ಅವರದ್ದಲ್ಲ ಅಂತ ನಂಗೂ ಗೊತ್ತು. ಅವರ ಕೊಠಡಿಗೆ ಮತ್ತು ಟ್ರಂಕಿಗೆ ಬೀಗ ಕಂಡಾಗಲೇ ನನಗೆ ಅನುಮಾನ ಬಂತು. ಅದೂ ಅಲ್ಲದೆ ಅವರ ಆತ್ಮಚರಿತ್ರೆಯನ್ನು ನಾನೇ ತಿದ್ದುಪಡಿ ಮಾಡಿ, ಟೈಪ್ ಮಾಡಿಸಿ, ಮುದ್ರಣಕ್ಕೆ ಕಳಿಸಲು ಓಡಾಡಿದ್ದೇನೆ. ಇದೆಲ್ಲಾ ಮಾಡಿಸುವಾಗ ಏನಿಲ್ಲವೆಂದರೂ ಅವರ ಆತ್ಮಚರಿತ್ರೆಯನ್ನು ಮೂರ್ನಾಲ್ಕು ಬಾರಿ ಓದಿದ್ದೇನೆ. ಆದರೆ, ಎಲ್ಲೂ ಅವರು ಈ ಸಂಬಂಧದ ಬಗ್ಗೆ ಬರೆದಿರಲಿಲ್ಲ. ಟೈಪ್ ಮಾಡಿದ ಆ ಪುಟ ಓದಿ ನನಗೆ ನಂಬಲಾಗಲಿಲ್ಲ. ಆ ಪುಟವನ್ನು ಅವರು ತಾವೇ ಟೈಪ್ ಮಾಡಿಸಿ, ಕೊನೆಯ ಗಳಿಗೆಯಲ್ಲಿ ಆತ್ಮಚರಿತ್ರೆಯ ಪುಸ್ತಕದಲ್ಲಿ ಪ್ರಕಟಿಸಲು ಹಿಂಜರಿದು, ಈ ಪುಟವನ್ನು ಇಲ್ಲೇ ಬಿಟ್ಟು ಹೋದರೇನೋ? ಎಂಬ ಸಂಶಯ' ಎಂದ ಶಿವರಾಮ. ಅದನ್ನು ಕೇಳಿ ಯರ್ರಿಸ್ವಾಮಿ ಗಹಗಹಿಸಿ ನಗತೊಡಗಿದ. ನಗುತ್ತಲೇ 'ಅಲ್ರೀ, ಕಾಲಗರ್ಭದಲ್ಲಿ ಅಡಗಿರುವ ಚರಿತ್ರೆಯನ್ನೇ ತಿರುಚಿ, ತಮಗೆ ಇಷ್ಟ ಬಂದ ಹಾಗೆ ಬರೆಯಿಸಿ, ಜನರನ್ನು ನಂಬಿಸುವ ಧೂರ್ತರು ಇರುವಾಗ ಶ್ರೀನಿವಾಸರಾಯರ ಟ್ರಂಕಿನಲ್ಲಿ ವಿಸ್ಕಿಯ ಬಾಟಲು ಇಡುವುದಾಗಲೀ, ಅವರ ಆತ್ಮಚರಿತ್ರೆಯಲ್ಲಿ ಪುಟವೊಂದನ್ನು ಸೇರಿಸುವುದಾಗಲೀ ಅಥವಾ ಇರುವ ಪುಟವೊಂದನ್ನು ಹರಿಯುವುದಾಗಲೀ ಅಂತಹ ಕಷ್ಟವಾಗಲಾರದಲ್ಲವೇ?' ಎಂದನು.

ಅಷ್ಟರಲ್ಲಿ ಜೋರಾಗಿ ತಮಟೆ ಬಾರಿಸುತ್ತಾ ರಾಚನು ಊರಿಗೆಲ್ಲಾ ಕೇಳುವಂತೆ 'ಹಳೇ ಹೆಸ್ರು ಹೋಯ್ತಂತೆ, ಹೊಸ ಹೆಸ್ರು ಬಂತಂತೆ. ಸೂಳೆಪುರ ಹೋಯ್ತಂತೆ, ತಮ್ಮೇಗೌಡಪುರ ಬಂತಂತೆ. ಇನ್ಮೇಲೆ ನಮ್ಮೂರು ತಮ್ಮೇಗೌಡಪುರ ಅಂತಪ್ಪೋ....' ಎಂದು ಕಿರುಚುತ್ತಾ ಹೋಗುತ್ತಿದ್ದ. ಆತನು ಹೊಡೆಯುತ್ತಿದ್ದ ತಮಟೆಯ ಶಬ್ದ ಇವರಿಬ್ಬರ ಕಿವಿಗೆ ಅಪ್ಪಳಿಸತೊಡಗಿತು.

●

